ಪಾರ್ಲರ್ ಜ್ಯೋತಿ'.

'ಆಯ್ತು, ಸೇರ್ಕೋ.... ಇವಾಗ ನನಗೆ ಕೆಲಸ ಇದೆ ಫೋನ್ ಇಡು'.

ಮಾಯಣ್ಣ ತಾರಸಿಯಿಂದ ಕೆಳಗಿಳಿದು ತನ್ನ ಮೇಜಿಗೆ ಬಂದಾಗ ಅವನಿಗಾಗಿ ಒಬ್ಬ ಯುವಕ ಕಾದು ನಿಂತಿದ್ದ. ಮಾಯಣ್ಣ ತನ್ನ ಕುರ್ಚಿಯಲ್ಲಿ ಕುಳಿತು ಹುಬ್ಬೇರಿಸಿ ಎದುರು ನಿಂತವನನ್ನು ಪ್ರಶ್ನಾರ್ಥಕವಾಗಿ ನಿಟ್ಟಿಸಲು,

'ಸಾರ್, ನಾನು ಬೀರಪ್ಪ, ಊರು ಗುಂಡ್ಲುಪೇಟೆ. ಅಮ್ಮು ಅವರ ಕೊಲೆಯ ವಿಷಯವಾಗಿ ಮಾತಾಡಬೇಕಿತ್ತು'.

'ಕೂತ್ಕೊಳ್ಳಿ ಬೀರಪ್ಪ...'

'ನಾನು ಹಾಸ್ಟೆಲ್‌ನಲ್ಲಿ ಇದ್ದುಕೊಂಡು, ವಿರಾಜಪೇಟೆ ಸರ್ಕಾರಿ ಕಾಲೇಜಲ್ಲಿ ಫೈನಲ್ ಬಿ.ಎ. ಓದ್ತಾ ಇದೀನಿ. ನಮ್ಮ ಪರಿವಾರದ ಒಟ್ಟು ಎಂಟು ಜನ, ಅಮ್ಮು ಅವರ ಪಕ್ಕದ ಗಣಪತಿಯವರ ಎಸ್ಟೇಟ್‌ನಲ್ಲಿ ಕಾಫಿ ತೋಟದ ಕೆಲಸ ಮಾಡ್ತಿದ್ರು. ವರ್ಷಕ್ಕೆ ಒನ್ ಟೈಮ್ ಪೇಮೆಂಟ್. ಒಂದು ರೀತಿ ಜೀತಾನೆ. ಈಗ ನಮ್ಮವರ್ಯಾರೂ ಅಲ್ಲಿ ತೋಟದ ಕೆಲಸ ಮಾಡ್ತಿಲ್ಲ. ನಮ್ಮ ಎಸ್ಟೇಟ್ ಓನರ್, ಮೊದ್ಲು ಜಡ್ ಪಿ ಮೆಂಬರ್ ಆಗಿದ್ದವ್ರು – ತುಂಬಾ ಪವರ್‌ಫುಲ್ ಸಾರ್. ಸುಮಾರು ವರ್ಷದ ಕೆಳಗೆ, ಗಣಪತಿಯವರು ಅಲ್ಲೇ ಒಂದು ಹೋಂ ಸ್ಟೇ ಮಾಡಬೇಕು ಅಂತಿದ್ರು. ಪಕ್ಕದ ಅಮ್ಮು ಅವರ ಎಸ್ಟೇಟ್‌ಗೆ ಅಂಟಿಕೊಂಡಂತೆ ಇದ್ದ ನದಿ ಬದಿಯ ಸ್ವಲ್ಪ ಭಾಗವನ್ನು ಬೋಟಿಂಗ್‌ಗೆ ಉಪಯೋಗಿಸಿಕೊಳ್ಳಲು ಖರೀದಿಗೆ ಕೇಳಿದ್ದರು. ಆಗ ಅಮ್ಮು ಅವರು ಮಾರಲು ಒಪ್ಪಿರಲಿಲ್ಲ. ಆಗ ಅಮ್ಮು ಮತ್ತು ಗಣಪತಿಯವರಿಗೆ, ಮಾತಿಗೆ ಮಾತು ಬೆಳೆದು ಜಗಳವಾಗಿ, ಗಣಪತಿಯವರು ಅಮ್ಮು ಅವರನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಅಲ್ಲೇ ತೋಟದಲ್ಲಿ ಕೆಲಸ ಮಾಡುತ್ತಿದ್ದ ನಮ್ಮವರೆಲ್ಲ ಅದಕ್ಕೆ ಸಾಕ್ಷಿ. ಆ ಮನುಷ್ಯನೂ ಅದೇ ತರ. ಅವನ ಜೊತೆಗೆ ಒಂದು ಖತರ್ನಾಕ್ ಕ್ರಿಮಿನಲ್ ಗ್ಯಾಂಗ್ ಇದೆ ಸಾರ್. ವಯಸ್ಸು ಅರವತ್ತಾದರೂ ಆ ವಯಸ್ಸಿನ ಘನತೆ ಇಲ್ಲ ಸಾರ್. ಈ ಹಿಂದೆ ಎರಡ್ಮೂರು ಕೂನಿ ಕರಾಬು ಮಾಡ್ಸಿದ್ದಾನೆ ಅಂತ ಎಲ್ಲರಿಗೂ ಗೊತ್ತು. ಅವನಿಗೆ ಯಾವ ಭಯವೂ ಇಲ್ಲ. ಅದಕ್ಕೋ, ಇನ್ನೇನಕ್ಕೋ, ಗಣಪತಿಯವರ ಹೋಂ ಸ್ಟೇ ಪ್ರಾಜೆಕ್ಟ್ ನಿಂತೇ ಹೋಯಿತು ಅಂತಿದ್ದರು. ನಾನು ಡಿಗ್ರಿ ಓದುತ್ತಿದ್ದ ಮೂರು ವರ್ಷಾನೂ ಅಮ್ಮು ಅವರೇ ನನ್ನ ಕಾಲೇಜ್ ಫೀಸ್ ಕಟ್ಟಿದ್ದಾರೆ. ಆ ಕೃತಜ್ಞತೆಗೆ ಮತ್ತೆ ಕಾಯಿಲೆ ಕಸಾಲೆ ಆದರೂ, ಗಣಪತಿ, ರಜಾ ಕೊಡದೇ ನಮ್ಮವರನ್ನ ಹಿಂಸೆ ಮಾಡ್ತಿದ್ರೂ ಅನ್ನೋ ಕೋಪದಿಂದ ಇದನ್ನು ನಿಮಗೆ ಹೇಳ್ತಿದ್ದೀನಿ. ನಮ್ಮ ಜನ ಅವತ್ತು ಕಂಡಿದ್ದನ್ನ, ಕೇಳಿದ್ದನ್ನ, ಕೋರ್ಟ್‌ನಲ್ಲಿ ಹೇಳಲು ಕೂಡ ಸಿದ್ಧ. ನಮಗೆ ಅನಿಸುವಂತೆ ಅಮ್ಮು ಕೊಲೆಯನ್ನು ಖಂಡಿತ ಗಣಪತಿಯೇ ಮಾಡ್ಸಿರ್ತಾನೆ. ದಯವಿಟ್ಟು ವಿಚಾರಣೆ ಮಾಡಿ ಸಾರ್'.

'ಓಕೆ... ಇದೆಲ್ಲಾ ವಿವರವಾಗಿ, ನಮ್ಮ ಸ್ಟೇಷನ್ ರೈಟರ್ ಹತ್ತಿರ, ಒಂದು ಹೇಳಿಕೆ ಬರೆಸಿ, ಸಹಿ ಹಾಕಿ ಕೊಟ್ಟು ಹೋಗಿ, ನಾನು ಏನು ಮಾಡಬೇಕೋ ನೋಡ್ತೀನಿ, ಮತ್ತೆ ನಿಮ್ಮನ್ನ ಕರುಸ್ತೀನಿ'.

ಬೀರಪ್ಪ ಹೋದ ಮೇಲೆ ವಿನಯ್ ಬಂದು,

'ಸಾರ್, ನೀವು ಹೇಳಿದ ಹಾಗೆ ಜಯಂತ್ ಅವರ ಬ್ಲಾಕ್ ಕಲರ್ ಬೆಂಜ್ ಕಾರಿನ ಹಿಸ್ಟರಿ ಚೆಕ್ ಮಾಡುದ್ವಿ. ಅಮ್ಮು ಕೊಲೆಯಾದ ಹಿಂದಿನ ರಾತ್ರಿಯೆಲ್ಲಾ ಜಯಂತ್ ಫ್ಯಾಕ್ಟರಿ ಮುಂದೇನೆ ಇದ್ದು, ಬೆಳಿಗ್ಗೆ 8.40ಕ್ಕೆ ಅಲ್ಲಿಂದ ಹೊರಟು 9.10ಕ್ಕೆ ಅಮ್ಮು ಮನೆ ಮುಂದೆ ಬಂದು, ಅಲ್ಲಿಂದ 9.50ಕ್ಕೆ ಹೊರಟು, ಅಲ್ಲಿಂದ ಎಲ್ಲಿಗೆ ಹೋಗಿದೆಯೋ ಗೊತ್ತಾಗಿಲ್ಲ ಸಾರ್. ಜಯಂತ್ ಅವರೂ ಕಾಣುಸ್ತಿಲ್ಲಾ ಸಾರ್. ಮನೆ, ಫ್ಯಾಕ್ಟರಿ ಎಲ್ಲೂ ಇಲ್ಲ ಸಾರ್. ಅವರ ಫೋನ್ ಕೂಡ ಸ್ವಿಚ್ ಆಫ್ ಆಗಿದೆ. ಕಾರ್ ನಂಬರ್ ಮತ್ತು ಡಿಸ್ಕ್ರಿಪ್ಷನ್, ವಯರ್ ಲೆಸ್ ಮೆಸೇಜ್ ಮಾಡಿ, ಸರ್ಚ್ ಅಂಡ್ ಟ್ರ್ಯಾಕ್ ಮಾಡೋದುಕ್ಕೆ ಹೇಳಬಹುದಾ ಸಾರ್?'

'ವಿನಯ್, ಅದನ್ನ ಮೊದಲು ಮಾಡಿ. ಅಮ್ಮು ಕೊಲೆಯಾದ ಮೇಲೆ ಜಯಂತ್ ಎಲ್ಲೂ ಕಾಣುಸ್ಕೊಂಡಿಲ್ಲ. ಕೊನೆ ಸಾರಿ ಅವಳ ಮುಖ ನೋಡೋಕು ಬಂದಿಲ್ಲ. ಜಯಂತ್ ಅವರ ಫ್ಯಾಕ್ಟರಿಯಿಂದ ವಾಚ್ ಮ್ಯಾನೊ, ಗಾರ್ಡೋ ಅಥವಾ ಅಲ್ಲೇ ಯಾರಿರ್ತಾರೊ ಅವರನ್ನ ಕರ್ಕೊಂಡ್ ಬನ್ನಿ'.

'ಯೆಸ್ ಸಾರ್'.

ಅರ್ಧ ಗಂಟೆಯಲ್ಲಿ ಭುಜಂಗನ ಜೊತೆ ಕುಳ್ಳನೆಯ, ನಡು ಪ್ರಾಯದ, ಎಣ್ಣೆಗೆಂಪು ಬಣ್ಣದ, ಕಪ್ಪು ಗುಂಗುರು ಕೂದಲಿನ, ಕೋಲು ಮುಖ, ತೇಲುವ ಗೋಲಿ ಕಣ್ಣಿನ, ಮೊಂಡು ಮೂಗಿನ, ಶ್ರಮಜೀವನದಲ್ಲಿ ಹುರಿಗಟ್ಟಿದ ದೇಹದ, ಗಡ್ಡಧಾರಿ ವ್ಯಕ್ತಿಯೊಬ್ಬ ಅಯ್ಯಪ್ಪ ಸ್ವಾಮಿ ಬಟ್ಟೆಯಲ್ಲಿ ಎದುರಿಗೆ ನಿಂತಿದ್ದ.

'ಸಾರ್, ನಾನು... ಜಯಂತ್ ಸಾರ್ ಅವರ ಫ್ಯಾಕ್ಟರೀಲಿ ಫೋರ್‌ಮನ್... ಮುರುಗನ್ ಅಂತ... ನಮ್ಮ ವಾಚ್ ಮ್ಯಾನ್ ಈಗ ಇಲ್ಲ. ಫ್ಯಾಕ್ಟರೀಲಿ ಮೆಟೀರಿಯಲ್ ಕದ್ದು ಓಡೋಗಿದ್ದಾನೆ. ಅದು, ತೆಫ್ಟ್ ಕೇಸು ಬಂದು, ಪಕ್ಕದ ಸ್ಟೇಷನ್ನಲ್ಲೇ ಬುಕ್ ಆಗಿದೆ'.

'ಎಲ್ಲಿ ಜಯಂತ್...?'

'ಈಗ ಎಲ್ಲಿದ್ದಾರೆ ಗೊತ್ತಿಲ್ಲ ಸಾರ್... ಈ ಕಾನ್ಸ್‌ಟೆಬಲ್ ಸಾರ್ ಎದುರ್ಗೇ ಫೋನ್ ಮಾಡ್ದೆ. ಸ್ವಿಚ್ ಆಫ್ ಬರ್ತಾ ಇದೆ'.

'ನೀವಿರೋದು ಎಲ್ಲಿ...?'

'ಅಲ್ಲೇ ಫ್ಯಾಕ್ಟರಿನಲ್ಲೇ, ಪಕ್ಕದಲ್ಲಿ ನಮ್ಮ ಫ್ಯಾಕ್ಟರೀದೆ ಖಾಲಿ ಗೋಡೌನಿದೆ. ಈಗ ನಂದು ವಾಸ ಅಲ್ಲೇ ಸಾರ್...'

'ಅಮ್ಮು ಅವರು ಗೊತ್ತಾ?'

'ಚೆನ್ನಾಗಿ ಗೊತ್ತು ಸಾರ್. ನಮ್ಮ ಸಾರ್ ಜೊತೆ ಕಲ್ಯಾಣ ಫಿಕ್ಸ್ ಆಗಿತ್ತು ಅವರಿಗೆ. ನಮಗೆಲ್ಲಾ ಫ್ಯಾಕ್ಟರಿ ಬುಕ್ ಎಲ್ಲಾ ಎಂಗೆ ಬರಿಬೇಕು ಅಂತ ಕಲುಸ್ಕೊಡ್ತಾಯಿದ್ರು ಸಾರ್'.

ಕಣ್ಣಂಚಲ್ಲಿ ಹನಿ ಮೂಡಿತ್ತು.

'ಜಯಂತ್ ಸಾರ್ ನಿನ್ನೆ ರಾತ್ರಿ ಫ್ಯಾಕ್ಟರಿನಲ್ಲೇ ಅವರ ಚೇಂಬರ್‌ನಲ್ಲೇ ಇದ್ರು, ಆದರೆ ಮಲಗಿಲ್ಲ, ರಾತ್ರಿ ಪೂರ ಲೈಟ್ ಆನ್ ಇತ್ತು. ನನ್ನತ್ರ ಸ್ವಲ್ಪ ಪ್ರೈವೇಟ್ ವಿಷಯಾನು ಮಾತಾಡ್ತಾರೆ. ಅಮ್ಮು ಅವರ ವಿಷಯದಲ್ಲಿ ತುಂಬಾ ವರಿ ಮಾಡ್ಕೊಂಡು ರಾತ್ರಿಯಿಂದ ಏನೂ ತಿಂದಿಲ್ಲ ಸಾರ್'.

'ಅಮ್ಮು ವಿಷಯದಲ್ಲಿ ಯಾಕೆ ವರಿ ಮಾಡ್ಕೊಂಡಿದ್ರು?'

'ಅದು ನನಗೆ ಸರಿಯಾಗಿ ಗೊತ್ತಿಲ್ಲ ಸಾರ್. ಕಲ್ಯಾಣ ಮ್ಯಾಟರ್ ಅಪ್ಸೆಟ್ ಆಗಿತ್ತು ಅಂತ ಮಾತ್ರ ಗೊತ್ತು. ಅದಕ್ಕೆ, ನಾನೇ ಸಾರ್‌ನ, ಅಮ್ಮು ಮೇಡಮ್ ಮನೆಗೆ ವೋಗಿ, ಕೂಲಾಗಿ ಮಾತಾಡಿ, ಸೆಟ್ ರೈಟ್ ಮಾಡ್ಕೊಳಿ ಸಾರ್ ಅಂತ ಕಳುಸ್ಕೊಟ್ಟೆ'.

'ಸರಿ, ನಿಮ್ಮ ಸಾರ್ ಏನಾದರೂ ಕಾಂಟಾಕ್ಟ್ ಆದ್ರೆ, ಫಸ್ಟ್ ನನಗೆ ಫೋನ್ ಮಾಡ್ಬೇಕು ಅಂತ ಹೇಳಿ. ಒಂದು ಸ್ಟೇಜ್ ಆದ್ಮೇಲೆ ನಮ್ಮ ಲಾಂಗ್ವೇಜು, ಸ್ಟೈಲು ಎಲ್ಲಾ ಬಾಳ ಡಿಫರೆಂಟಾಗಿರ್ತಾದೆ... ಏನು...'

'ಹೇಳ್ತೀನಿ ಸಾರ್'.

ಮುರುಗನ್ ಹೊರಟ ಮೇಲೆ ಭುಜಂಗನ ಕುರಿತು,

'ನಾಳೆ, ನೀವೂ, ವಿನಯ್, ರೆಡಿಯಾಗಿರಿ. ಒಂದು ಕಾರ್ ಅರೇಂಜ್ ಮಾಡಿ, ಬೆಳಿಗ್ಗೆ ಆರು ಗಂಟೆಗೆ ಬೆಂಗಳೂರು ಬಿಡ್ಬೇಕು... ರಾತ್ರಿ ಮಡಿಕೇರಿಯಿಂದ ವಾಪಸ್ ಬಂದುಬಿಡಬಹುದು. ಹಾಗೆ ಆ ಕೋರ್ಟ್ ಪೀಸಿ ಸಿದ್ಧರಾಜುನ ಕರೀರಿ'.

ಸಿದ್ಧರಾಜು ದಡಬಡನೆ ಬಂದು ಸಲ್ಯೂಟ್ ಹೊಡೆದು ನಿಂತ.

'ಸಿದ್ಧರಾಜು, ಹೇಗೂ ಎರಡು ದಿನ ಕೋರ್ಟ್ ರಜ. ನೀವು ಮಫ್ತಿಯಲ್ಲಿ ಆ ಡೈರೆಕ್ಟರ್ ಇದ್ದಾನಲ್ಲಾ, ಅವನ ಕಂಪ್ಲೀಟ್ ಮೂವ್‌ಮೆಂಟ್ಸ್, ಕ್ಲೋಸಾಗಿ ಟ್ರ್ಯಾಕ್ ಮಾಡಿ. ಅವನು ಸೂಪರ್ ಕಿಲಾಡಿ. ಸ್ವಲ್ಪವೂ ಡೌಟ್ ಬರ್ಬಾರ್ದು ಅವನ್ಗೆ. ಏನು'.

'ಯೆಸ್ ಸಾರ್...'

'ಹೋಗಿ ಆ ರೈಟರ್ ಕುಮಾರ್‌ನ ಕಳಿಸಿ'.

ಕುಮಾರ್ ಸಲ್ಯೂಟ್ ಹೊಡೆದು, ಮುಂದೆ ನಿಂತ. 'ಸಾರ್...'

'ಕುಮಾರ್, ಆ ಜಯಂತ್ ಫೋನ್ ಸ್ವಿಚ್ ಆಫ್ ಆಗಿದೆ. ಆಕ್ಟೀವ್ ಆದ ತಕ್ಷಣ ಟವರ್ ಡಂಪ್ ಮಾಡಿ, ಲೊಕೇಷನ್ ಐಡೆಂಟಿಫೈ ಮಾಡಿ, ಅಂತ ಕಂಟ್ರೋಲ್ ರೂಮ್‌ಗೆ ಮೆಸೇಜ್ ಕೊಡಿ. ಟ್ರ್ಯಾಕ್ ಆದ ತಕ್ಷಣ, ನೀವು ಅವನನ್ನ ಟೈಟಾಗಿ ಮಾನಿಟರ್ ಮಾಡಿ. ಆ ಜವರಯ್ಯ ಅವರನ್ನ ಕಳಿಸಿ'.

'ಯೆಸ್ ಸಾರ್...'

'ಸಾರ್...' ಜವರಯ್ಯ ಬಂದು ಮೇಜಿನ ಮುಂದೆ ಶಿಸ್ತಾಗಿ ನಿಂತರು.

'ಜವರಯ್ಯನವರೆ, ಜಯಂತ್ ಮನೆ ಆಮೇಲೆ ಫ್ಯಾಕ್ಟರಿ ಎರಡೂ ವಾಚ್ ಮಾಡಿ. ಏನು ಮೂವ್‌ಮೆಂಟ್ಸ್ ಇದ್ದರೂ ನ್ಯೂಸ್ ಕೊಡ್ತಾಯಿರಬೇಕು. ಏನು... ಹಾಗೆ ರೈಟರ್ ಕುಮಾರ್‌ಗೆ ಹೇಳಿ ಅಮ್ಮು ಅವರ ಮನೇಲೀ ಕಲೆಕ್ಟ್ ಮಾಡಿರೋ ಅಷ್ಟೂ ಬಿಲ್, ಬ್ಯಾಂಕು, ಕ್ರೆಡಿಟ್ ಕಾರ್ಡ್, ಫೋನ್ ಟ್ರ್ಯಾನ್ಸಾಕ್ಷನ್‌ಗಳನ್ನೂ ಚೆಕ್ ಮಾಡಿ, ಡೀಟೈಲಾಗಿ ಸ್ಟಡಿ ಮಾಡೋದುಕ್ಕೆ'.

'ಯೆಸ್ ಸಾರ್...'

(ಸಶೇಷ)